**ದಿನಾಂಕ: 15.02.2021 ರಂದು ಮಧ್ಯಾಹ್ನ 03.00 ಕ್ಕೆ ರಾಜ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ. ಮಹೇಂದ್ರ ಜೈನ್ ಭಾ.ಆ.ಸೇ ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ 21ನೇ ರಾಜ್ಯ ಮಟ್ಟದ ಪ್ರಗತಿ ಪರಿಶೀಲನ ಸಭೆಯ ನಡವಳಿ.**

**ಸಭೆಯ ಹಾಜರಾತಿ ಪಟ್ಟಿ ಲಗತ್ತಿಸಿದೆ.**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಶ್ರೀ.ಮಹೇಂದ್ರ ಜೈನ್ **ಭಾ.ಆ.ಸೇ** ರವರು ಸಭೆಯಲ್ಲಿ ಪಾಲ್ಗೊಂಡಿದ್ದ ಶ್ರೀ. ಅತೀಫ್ ರಷೀದ್, ಮಾನ್ಯ ಉಪಾಧ್ಯಕ್ಷರು, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಮತ್ತು ಶ್ರೀ. ಆನಂದ್, ಕಾರ್ಯದರ್ಶಿ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ರವರನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ದಿನಾಂಕ: 07.08.2020 ರಂದು ನಡೆದ 20ನೇ ರಾಜ್ಯ ಮಟ್ಟದ ಸಭಾ ನಡವಳಿಯನ್ನು ಅಂಗೀಕರಿಸಿ, ಕೈಗೊಂಡ ನಿರ್ಣಯಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲಿಸಲಾಯಿತು.

1. ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿಯಾದ ಶ್ರೀ.ಬಿ.ಆನಂದ್ ರವರು ರಾಜ್ಯದಲ್ಲಿ 30 ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಪೈಕಿ 15 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಭರ್ತಿಯಾಗಿದ್ದು, ಉಳಿದ 15 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಹುದ್ದೆ ತುಂಬದೇ ಇರುವ ಬಗ್ಗೆ ಗಮನಿಸಿದರು. ಮುಂದುವರೆದು, ರಾಜ್ಯದ ಆಯ-ವ್ಯಯದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಾಕಷ್ಟು ಆರ್ಥಿಕ ಕಡಿತವನ್ನು ಮಾಡಿದ್ದು, ಇದರ ಬಗ್ಗೆ ಮುಂದಿನ ವರ್ಷದಲ್ಲಿ ಹೆಚ್ಚುವರಿ ಆಯ-ವ್ಯಯ ಒದಗಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಇದಕ್ಕೆ ಪ್ರತಿಕ್ರಯಿಸಿದ ಅಪರ ಮುಖ್ಯ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಕೆಲವು ಇಲಾಖೆಯನ್ನು ಹೊರತುಪಡಿಸಿ ಎಲ್ಲಾ ಇಲಾಖೆಗಳಿಗೆ ಆಯ-ವ್ಯಯದಲ್ಲಿ ಕಡಿತಗೊಳಿಸಲಾಗಿದೆ ಎಂದು ಸೂಚಿಸಿ, ಪ್ರಸಕ್ತ ಸಾಲಿನಲ್ಲಿ ಆಯ-ವ್ಯಯದ ಪ್ರಮಾಣವನ್ನು ಹೆಚ್ಚಿಸಲು ಸರ್ಕಾರಕ್ಕೆ ಕೋರಲಾಗಿದೆ ಎಂದು ತಿಳಿಸಿದರು.

   **(ಕ್ರಮ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ)**

2. ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಅಂಗನವಾಡಿಗಳ ಕಟ್ಟಡ ನಿರ್ಮಿಸಲು ಪ್ರಧಾನ ಮಂತ್ರಿ ಜನ ವಿಕಾಸ ಯೋಜನೆಯಡಿಯಲ್ಲಿ ರೂ.7.00 ಲಕ್ಷಗಳನ್ನು ನೀಡುತ್ತಿದ್ದು, ಸದರಿ ಮೊತ್ತ ಕಟ್ಟಡ ಸಾಮಾಗ್ರಿಗಳ ಬೆಲೆ ಹೆಚ್ಚಾದ ಕಾರಣ ಸಾಕಾಗುತ್ತಿಲ್ಲವಾದ್ದರಿಂದ ಹೆಚ್ಚುವರಿ ಅನುದಾನ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಉಪಾಧ್ಯಕ್ಷರು, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ರವರಿಗೆ ಕೋರಲಾಯಿತು. ಈ ಬಗ್ಗೆ ಲಿಖಿತ ಮನವಿಯನ್ನು ನೀಡುವಂತೆ ಉಪಾಧ್ಯಕ್ಷರು, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ರವರು ತಿಳಿಸಿದರು.

**(ಕ್ರಮ : ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)**

3. ವಸತಿ ಇಲಾಖೆ:-

ರಾಜ್ಯ ಸರ್ಕಾರದ ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗಾಗಿ ಶೇ.10 ರಿಂದ ಶೇ.15 ಕ್ಕೆ ಮೀಸಲಾತಿಯನ್ನು ಹೆಚ್ಚಿಸುವ ನೀತಿಯ ಬಗ್ಗೆ ಸಚಿವ ಸಂಪುಟಕ್ಕೆ ಮಂಡಿಸಿದ್ದು, ಸಚಿವ ಸಂಪುಟದ ನಿರ್ಣಯದ ಬಳಿಕ ಕ್ರಮ ವಹಿಸಲಾಗುವುದು ಎಂದು ಕಾರ್ಯದರ್ಶಿ, ವಸತಿ ಇಲಾಖೆ ರವರು ತಿಳಿಸಿದರು.

**(ಕ್ರಮ : ಕಾರ್ಯದರ್ಶಿ, ವಸತಿ ಇಲಾಖೆ)**

4. ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿ ಶ್ರೀ.ಬಿ.ಆನಂದ್ ರವರು ಅಲ್ಪಸಂಖ್ಯಾತರ ಸಮುದಾಯಕ್ಕೆ ರಾಜ್ಯ ಸರ್ಕಾರದಲ್ಲಿ ಜಾರಿಗೊಳಿಸುತ್ತಿರುವ ಯೋಜನೆಗಳ ಬಗ್ಗೆ ಒಂದು ಸಂಕ್ಷಿಪ್ತ ವಿವರವನ್ನು ನೀಡುವಂತೆ ಕೋರಿದರು. ಅದರಂತೆ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ ಜಾರಿಗೊಳಿಸುತ್ತಿರುವ ಯೋಜನೆಗಳ ಬಗ್ಗೆ ವಿವರವನ್ನು ನೀಡಿದರು. ಶಿಕ್ಷಣ ಕ್ಷೇತ್ರ ಮತ್ತು ಸೇನೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯತೆ ಹೆಚ್ಚಿಸಲು ತರಬೇತಿ ನೀಡುತ್ತಿರುವ ಯೋಜನೆಗಳ ಮಾನ್ಯ ಉಪಾಧ್ಯಕ್ಷರು, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ರವರು ಪ್ರಶಂಶಿಸಿದರು. ಮುಂದುವರೆದು, ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಎಂಎಸ್‌ಡಿಪಿ ಯೋಜನೆಯಲ್ಲಿ ಈ ಹಿಂದೆ ಅಳವಡಿಸಿಕೊಂಡಿದ್ದ ಜಿಲ್ಲೆಗಳನ್ನು ಈಗ ಹೊರತುಪಡಿಸಿ ಹೊಸ ಜಿಲ್ಲೆಗಳನ್ನು ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮದಡಿಯಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಕಲಬುರಗಿ ಲೋಕ ಸಭೆ ಸದಸ್ಯರಾದ ಡಾ॥ ಉಮೇಶ್ ಜಾದವ್ ರವರು ಯೋಜನೆಯ ಅನುಷ್ಠಾನದ ಬಗ್ಗೆ ತಮ್ಮ ಸಂತಸವನ್ನು ವ್ಯಕ್ತಿಪಡಿಸಿ ತಮ್ಮ ಕ್ಷೇತ್ರದಲ್ಲಿ ಬರುವ ಚಿಂಚೋಲಿ ಮತ್ತು ಇತರೆ ತಾಲ್ಲೂಕುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಅಲ್ಪಸಂಖ್ಯಾತರಿದ್ದು, ಸದರಿ ಸ್ಥಳಗಳಲ್ಲಿ ಇನ್ನಷ್ಟು ಅಭಿವೃದ್ಧಿ ಕಲ್ಪಿಸುವ ಅಗತ್ಯವಿದೆ ಎಂದು ಸೂಚಿಸಿ

ಕಲಬುರಗಿ ಜಿಲ್ಲೆಯನ್ನೂ ಪ್ರಸ್ತುತ ಜಿಲ್ಲೆಗಳೊಂದಿಗೆ ಸೇರಿಸಿ ಯೋಜನೆಯನ್ನು ಪ್ರಧಾನ ಮಂತ್ರಿ ಜನ ವಿಕಾಸ ಕಾರ್ಯಕ್ರಮದಡಿಯಲ್ಲಿ ಅನುಷ್ಠಾನ ಗೊಳಿಸಲು ಕೋರಿದರು.

**(ಕ್ರಮ : ನಿರ್ದೇಶಕರು, ಅಲ್ಪಸಂಖ್ಯಾತರ ನಿದೇಶನಾಲಯ)**

5. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯೋಜಿಸಲಾಗುವ ಪ್ರಧಾನ ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮದ ಪ್ರಗತಿ ಪರಿಶೀಲನ ಸಭೆಗಳು ಹಲವಾರು ಜಿಲ್ಲೆಗಳಲ್ಲಿ ನಡೆಸದೇ ಇರುವುದನ್ನು ಗಮನಿಸಲಾಗಿ, ಶ್ರೀ.ಎಲ್.ಉಮೇಶ್ ಮಾನ್ಯ ಲೋಕಸಭಾ ಸದಸ್ಯರು ಕಲಬುರಗಿ ಜಿಲ್ಲೆ ರವರೂ ಸಹ ತಮ್ಮ ಜಿಲ್ಲೆಯಲ್ಲಿ ಪ್ರತಿ ತ್ರೈಮಾಸಕ್ಕೊಮ್ಮೆ ತಪ್ಪದೇ ಸಭೆಯನ್ನು ನಡೆಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸುವಂತೆ ಕೋರಿದರು.

**(ಕ್ರಮ : ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ)**

6. ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಬಗ್ಗೆ :-
ಕೋಮು ಘಟನೆಗಳನ್ನು ನಿಯಂತ್ರಿಸಲು ಮತ್ತು ಕೋಮು ಸೌಹಾರ್ದತೆಯನ್ನು ಕಾಪಾಡಲು ಪ್ರಮುಖ ಹಬ್ಬಗಳ ಸಂದರ್ಭಗಳಲ್ಲಿ ಶಾಂತಿ ಸಭೆಗಳನ್ನು ನಡೆಸಲಾಗುತ್ತಿದ್ದು, ಶಾಂತಿ ಸಭೆಗಳನ್ನು ನಿರಂತರವಾಗಿ ಎಲ್ಲಾ ಜಿಲ್ಲೆಗಳಲ್ಲಿ ನಡೆಸುವಂತೆ ಮಾನ್ಯ ಉಪಾಧ್ಯಕ್ಷರು, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ರವರು ಸೂಚಿಸಿದರು.

**(ಕ್ರಮ : ಅಪರ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ)**

7. ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಪ್ರಧಾನ ಮಂತ್ರಿ ಜನ ವಿಕಾಸ ಯೋಜನೆಯಡಿಯಲ್ಲಿ 41 ಕಾರ್ಯಕ್ರಮಗಳ ಒಟ್ಟಾರೆ ರೂ.549.44 ಕೋಟಿಗಳ ಪ್ರಸ್ತಾವನೆಯನ್ನು ಕೇಂದ್ರ ಅಲ್ಪಸಂಖ್ಯಾತರ ಮಂತ್ರಾಲಯಕ್ಕೆ ಸಲ್ಲಿಸಲು ಅನುಮೋದಿಸಲಾಯಿತು.

| Sl No. | Name of Projects | Total Cost |
|---|---|---|
| 1 | Construction of Anganwadi centre at Manapa Uruompadi Church, Mangalore,Dakshina Kannada | 16.25 |
| 2 | Construction of Anganwadi centre at Manapa Kannur Dayambu Borugudde, Mangalore,Dakshina Kannada | 12.75 |
| 3 | Construction of Anganwadi at Jadekallu kasaba,,Puttur,Dakshina Kannada | 20.00 |

| | | |
|---|---|---|
| 4 | Construction of Anganwadi centre at Konkad,Puttur Panchayath,Puttur,Dakshina Kannada | 17.00 |
| 5 | Construction of Additional classrooms at Higher primary school building, Bolathimogaru Bantwala Taluk, Dakshina Kannada | 600.00 |
| 6 | Construction of Residentiasl school at Kolnadu,Vitla,Bantwala block,Dakshina kannada | 2625.00 |
| 7 | Construction of Post metric Hostel and Post Metric Girls Hostels at Mooda, Paane, Bantwala, Dakshina kannada | 1125.00 |
| 8 | Construction Hunar Hub, Ammunje, PaneMangalkore, Bantwala,Dakshina Kannada | 375.00 |
| 9 | Construction of Working Women Hostel at Ammunje, Panemangalore,Bantwala, Dakshina Kannada | 590.00 |
| 10 | Construction of Government Higher primary school, Bengre High school, Mangalore Dakshina kannada | 460.00 |
| 11 | Construction of Sadbhavana Mantap at A mohiddin jumma masjid opposite Mangalore, Dakshina Kannada | 700.00 |
| 12 | Construction of Government Higher primary school Kannur, Manglaore Dakshina Kannada | 475.00 |
| 13 | Construction of Post metric Boys Hostel at Kasaba bazar, mangalore, Dakshina Kannada | 635.00 |
| 14 | Construction of Sadbhavana Mantap at Balmatha, Shanti church, Attavara, Mangalore. Dakshina Kannada | 600.00 |
| 15 | Construction of Sadbhavana Mantap at Kadri markar hill,Mangalore. Dakshina Kannada | 780.00 |
| 16 | Construction of Sadbhavana Mantap at Mannagudde Bolooru, Mangalore. Dakshina Kannada | 785.00 |
| 17 | Construction of Sadbhavana Mantap at Mission compound, Bolooru, Mangalore. Dakshina Kannada | 775.00 |
| 18 | Construction of Sadbhavana Mantap at Balmatha near Dayasis office, attavara , Mangalore. Dakshina Kannada | 770.00 |
| 19 | Construction of Community Health centre Bengre, near Kiliriya masjid, Mangalore, Dakshina Kannada | 775.00 |
| 20 | Construction of Residentiasl school at Kemminje,Kasaba Puttur block,Dakshina kannada | 2625.00 |

| | | |
|---|---|---|
| 21 | Construction of Sadbhavana Mantap at Uppinagadi,Puttur Block, Dakshina Kannada | 825.00 |
| 22 | Construction of Pre university Boys hostel,uppingadi,Puttur Block, Dakshina Kannada | 635.00 |
| 23 | Construction of 50 bedded Hopital at Kurnadu,Panemangalore, Dakshina Kannada | 1250.00 |
| 24 | Construction of Agricultural market at Ullal-olapete Mangalore Dakshina Kannada | 350.00 |
| 25 | Construction of Agricultural market at Ullal-Mangalore -B,Mangalore Dakshina Kannada | 225.00 |
| 26 | Construction of Government PU college at near naringana high school,Panemangalroe Mangalore Dakshina kannada | 825.00 |
| 27 | Construction Hunar Hub, Permanioor,Mangalkore, Dakshina Kannada | 385.00 |
| 28 | Construction of Residentiasl school at Puttila Kokkada,Belthangady block,Dakshina kannada | 2625.00 |
| 29 | Construction of Post metric girls hostel at Kuvettu, Belthangady, Dakshina Kannada | 610.00 |
| 30 | Construction of Community Health centre Mittabagilu,belthangady, Dakshina Kannada | 700.00 |
| 31 | Construction of Community health centre at Iddya Surathkal, Mangalore Dakshina Kannada | 660.00 |
| 32 | Installation of Virtual smart classrooms in Moulana Azad schools under Directorate of Minorities. | 587.86 |
| 33 | Proposal for supply of Helath Care Cloud Connected kit solution for benefits of health services in Morarji Desai Residential schools,Moulana Azad schools under Directorate of Minorities. | 2167.66 |
| 34 | Digital Class Room Solution (SSA – 234 Schools, MDRS –21 Schools, MAS – 31 Schools, Hostels - 88, Total=374)<br>• Integrated Computer Projector<br>• Digital Multimedia Learning Content developed as per syllabus for Urdu, Kannada & English Medium of instruction for Class 1 to Class 10<br>• 1 KVA Integrated UPS With 20 Min Backup<br>[374*3=1122::3 quantity for each school] | 3915.78 |

| | | |
|---|---|---|
| 35 | Computer Lab (SSA – 234 Schools, MDRS –21 Schools, MAS –31 Schools, Hostels - 88, Total=374) | 8471.10 |
| 36 | IT Assets (20 Computers, 1 server, 20 headphones, Networking & Wiring) with Server OS and CALS License | |
| 37 | Furniture (21 Chair, Computer Table with 21 cabinets) | |
| 38 | 6 KVA Integrated UPS With 2 Hrs. Backup | |
| 39 | English Lab (SSA – 234 Schools, MDRS –21 Schools, MAS –31 Schools, Hostels - 88, Total=374 Schools) 3 yrs. Subscription for 21 Licenses per Lab, Per School) | 6399.14 |
| 40 | Programming (SSA – 234 Schools, MDRS –21 Schools, MAS –31 Schools, Hostels - 88, Total=374) 3 yrs. Subscription for 21 Licenses per Lab, Per School) | 8583.30 |
| 41 | Proposal for supply of Self electric generation through Solars in Morarji Desai Residential schools,Moulana Azad schools under Directorate of Minorities. | 968.60 |
| | **Total** | **54944.44** |

(ಮಹೇಂದ್ರ ಜೈನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ